॥ಪಂಡಿತಾಃ ಸಮದರ್ಶಿನಃ॥

# ದೇಶೀಯ ವಿದ್ಯಾಶಾಲಾ ಸಮಿತಿ (ರಿ.), ಶಿವಮೊಗ್ಗ

**ಸರ್.ಎಂ.ವಿ.ರಸ್ತೆ, ಬಸವೇಶ್ವರ ವೃತ್ತ, ಶಿವಮೊಗ್ಗ-577201, ದೂರವಾಣಿ: 08182-223802**

**ಉಲ್ಲೇಖ: ಡಿ.ವಿ.ಎಸ್/ಎಂ.ಸಿ/ಸ.ಪ್ರಾ.ಹು.ನೇ.ನೇ/260/ 2019-20** **ದಿನಾಂಕ: 22/07/2019**

## ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ನೇರ ನೇಮಕಾತಿ

ದೇಶೀಯ ವಿದ್ಯಾಶಾಲಾ ಸಮಿತಿ (ರಿ), ಶಿವಮೊಗ್ಗ ಇವರ ಆಶ್ರಯದಲ್ಲಿ ನಡೆಯುತ್ತಿರುವ ಅನುದಾನಿತ ಪದವಿ ಕಾಲೇಜು, "ಡಿ.ವಿ.ಎಸ್ ಕಲಾ ಮತ್ತು ವಿಜ್ಞಾನ ಕಾಲೇಜು", ಶಿವಮೊಗ್ಗ, ಇಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಅನುದಾನಿತ ಹುದ್ದೆಗಳ ನೇರ ನೇಮಕಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅನುದಾನಿತ ವಿಭಾಗಗಳಲ್ಲಿ ಖಾಲಿ ಇರುವ ಖಾಯಂ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ :ಕಾಶಿಇ:200:ಖಾಹುಭ:ಶಿವಿ:2018-19:ನೇ.ವಿ-2, ದಿನಾಂಕ:06.07.2019 ಹಾಗೂ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಶಿವಮೊಗ್ಗ ಇವರುಗಳ ಪತ್ರ ಸಂಖ್ಯೆ: ಪ್ರಾಕಶಿ:ಕಾಶಿಇ:140:ಖಾಲಿಹುಭ:2018-19, ದಿನಾಂಕ: 09.07.2019 ಪ್ರಕಾರ ಅನುಮತಿಸಿದ ಮೇರೆಗೆ ಖಾಲಿ ಇರುವ ಈ ಕೆಳಕಂಡ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಹ ಅಭ್ಯರ್ಥಿಗಳು ನಿಗದಿತ ಅರ್ಜಿ ನಮೂನೆಯನ್ನು (ಕನ್ನಡ ಅಥವಾ ಇಂಗ್ಲೀಷ್) ಸಂಸ್ಥೆಯ ವೆಬ್‌ಸೈಟ್ www.dvsinstitutions.com ನಿಂದ ಡೌನ್ ಲೋಡ್ ಮಾಡಿಕೊಂಡು ಭರ್ತಿ ಮಾಡಿ ಅರ್ಜಿಯಲ್ಲಿ ನಮೂದಿಸಿರುವಂತೆ ಮೀಸಲಾತಿ ಬಯಸುವ ಅಭ್ಯರ್ಥಿಗಳು (ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, ಸಾಮಾನ್ಯ ಅಭ್ಯರ್ಥಿ(ಮಹಿಳೆ), ಸಾಮಾನ್ಯ ಅಭ್ಯರ್ಥಿ(ಗ್ರಾಮೀಣ ಅಭ್ಯರ್ಥಿ), ಸಕ್ಷಮ ಪ್ರಾಧಿಕಾರಗಳಿಂದ ಆದರಿಸಲು ಪಡೆದುಕೊಂಡಿರುವ ಪ್ರಮಾಣ ಪತ್ರದ ದೃಢೀಕರಿಸಿದ ಜೆರಾಕ್ಸ್ ಪ್ರತಿಗಳೊಂದಿಗೆ **"ಗೌರವ ಕಾರ್ಯದರ್ಶಿಗಳು," ದೇಶೀಯ ವಿದ್ಯಾಶಾಲಾ ಸಮಿತಿ (ರಿ.), ಶಿವಮೊಗ್ಗ,** ಇವರ ಹೆಸರಿನಲ್ಲಿ ಸಾಮಾನ್ಯ ಅಭ್ಯರ್ಥಿ, ಸಾಮಾನ್ಯ ಅಭ್ಯರ್ಥಿ(ಮಹಿಳೆ), ಸಾಮಾನ್ಯ ಅಭ್ಯರ್ಥಿ (ಗ್ರಾಮೀಣ ಅಭ್ಯರ್ಥಿ), ಪ್ರವರ್ಗ-1 ಕ್ಕೆ ಸಂಬಂಧಿಸಿದ ಅಭ್ಯರ್ಥಿಗಳು ನಿಗದಿತ ಶುಲ್ಕ ರೂ. 2000/-ಗಳ ಡಿ.ಡಿ. ಹಾಗೂ ಪ.ಜಾ./ಪ.ಪಂ. ಅಭ್ಯರ್ಥಿಗಳು ರೂ. 1000/-ಗಳ ಡಿ.ಡಿ.ಯನ್ನು ಲಗತ್ತಿಸಿ ದಿನಾಂಕ:20.08.2019 ರ ಸಂಜೆ 05:00 ಘಂಟೆಯೊಳಗೆ **"ಗೌರವ ಕಾರ್ಯದರ್ಶಿಗಳು," ದೇಶೀಯ ವಿದ್ಯಾಶಾಲಾ ಸಮಿತಿ (ರಿ.), ಸರ್.ಎಂ.ವಿ. ರಸ್ತೆ, ಬಸವೇಶ್ವರ ವೃತ್ತ, ಶಿವಮೊಗ್ಗ-577201,** ಇವರ ವಿಳಾಸಕ್ಕೆ ತಲುಪುವಂತೆ ನೊಂದಾಯಿತ ಅಂಚೆ ಮೂಲಕ ಕಳುಹಿಸತಕ್ಕದ್ದು. ಲಕೋಟೆಯ ಮೇಲೆ ಎಡಭಾಗದಲ್ಲಿ **"ಪದವಿ ಕಾಲೇಜು ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಅರ್ಜಿ"** ಎಂದು ನಮೂದಿಸಿರಬೇಕು. ಅರ್ಜಿಯ ಒಂದು ಪ್ರತಿಯನ್ನು **"ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಸಹ್ಯಾದ್ರಿ ಕಾಲೇಜು ಪುರುಷ ವಸತಿ ನಿಲಯದ ಹಿಂಭಾಗ, ಮತ್ತೂರು ರಸ್ತೆ, ಶಿವಮೊಗ್ಗ"** ಇವರಿಗೆ ನಿಗದಿತ ಅವಧಿಯೊಳಗೆ ಕಡ್ಡಾಯವಾಗಿ ದಿನಾಂಕ: 20.08.2019ರ ಸಂಜೆ 05.00 ಘಂಟೆಯೊಳಗೆ ತಲುಪುವಂತೆ ಕಳುಹಿಸತಕ್ಕದ್ದು. ಅಪೂರ್ಣವಾದ ಅರ್ಜಿಗಳು ಹಾಗೂ ಅಗತ್ಯ ದೃಢೀಕೃತ ದಾಖಲೆಗಳನ್ನು ಲಗತ್ತಿಸದೆ ಇರುವ ಮತ್ತು ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಅರ್ಜಿ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.

| ಕ್ರ.ಸಂ. | ವಿಷಯ | ಭರ್ತಿ ಮಾಡಲು ಅನುಮತಿ ನೀಡಿರುವ ಹುದ್ದೆಗಳು | ಹುದ್ದೆ ಭರ್ತಿ ಮಾಡಬೇಕಾದ ಮೀಸಲಾತಿ | ಹುದ್ದೆಗಳ ಸಂಖ್ಯೆ |
|---|---|---|---|---|
| 01. | ಇಂಗ್ಲೀಷ್ | 03 | ಪರಿಶಿಷ್ಟ ಜಾತಿ | 01 |
| | | | ಪರಿಶಿಷ್ಟ ಪಂಗಡ | 01 |
| | | | ಸಾಮಾನ್ಯ ಅಭ್ಯರ್ಥಿ (ಮಹಿಳೆ) | 01 |
| 02. | ಭೌತಶಾಸ್ತ್ರ | 06 | ಪರಿಶಿಷ್ಟ ಜಾತಿ | 01 |
| | | | ಸಾಮಾನ್ಯ ಅಭ್ಯರ್ಥಿ | 01 |
| | | | ಪರಿಶಿಷ್ಟ ಪಂಗಡ | 01 |
| | | | ಸಾಮಾನ್ಯ ಅಭ್ಯರ್ಥಿ (ಮಹಿಳೆ) | 01 |
| | | | ಪ್ರವರ್ಗ-1 | 01 |
| | | | ಸಾಮಾನ್ಯ ಅಭ್ಯರ್ಥಿ (ಗ್ರಾಮೀಣ ಅಭ್ಯರ್ಥಿ) | 01 |

| | | | | |
|---|---|---|---|---|
| 03. | ರಸಾಯನಶಾಸ್ತ್ರ | 06 | ಪರಿಶಿಷ್ಟ ಜಾತಿ | 01 |
| | | | ಸಾಮಾನ್ಯ ಅಭ್ಯರ್ಥಿ | 01 |
| | | | ಪರಿಶಿಷ್ಟ ಪಂಗಡ | 01 |
| | | | ಸಾಮಾನ್ಯ ಅಭ್ಯರ್ಥಿ (ಮಹಿಳೆ) | 01 |
| | | | ಪ್ರವರ್ಗ–1 | 01 |
| | | | ಸಾಮಾನ್ಯ ಅಭ್ಯರ್ಥಿ (ಗ್ರಾಮೀಣ ಅಭ್ಯರ್ಥಿ) | 01 |
| 04. | ಗಣಿತಶಾಸ್ತ್ರ | 02 | ಪರಿಶಿಷ್ಟ ಜಾತಿ | 01 |
| | | | ಸಾಮಾನ್ಯ ಅಭ್ಯರ್ಥಿ | 01 |
| 05. | ಸಸ್ಯಶಾಸ್ತ್ರ | 02 | ಪರಿಶಿಷ್ಟ ಜಾತಿ | 01 |
| | | | ಪರಿಶಿಷ್ಟ ಪಂಗಡ | 01 |
| 06. | ಗ್ರಂಥಪಾಲಕರು | 01 | ಏಕವ್ಯಕ್ತಿ ವಿಭಾಗ | 01 |
| **ಒಟ್ಟು 20 ಹುದ್ದೆಗಳು** | | | | |

**ನಿಬಂಧನೆಗಳು : (01) ವಿದ್ಯಾರ್ಹತೆ :–** ಅಭ್ಯರ್ಥಿಗಳು ಸಂಬಂಧಪಟ್ಟ ವಿಷಯದಲ್ಲಿ ಸ್ನಾತಕೋತ್ತರ ಪದವಿ ಹೊಂದಿದ್ದು ಕನಿಷ್ಠ 55% ಅಂಕಗಳನ್ನು ಪಡೆದಿರಬೇಕು. (ಪರಿಶಿಷ್ಟ ಜಾತಿ/ಪಂಗಡದ ಅಭ್ಯರ್ಥಿಗಳಿಗೆ 50% ಅಂಕಗಳು) ಮತ್ತು **NET / SLET** ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. **Ph.D** ಪದವಿಯನ್ನು ಪಡೆದಿರುವ ಅಭ್ಯರ್ಥಿಗಳಿಗೆ **NET / SLET** ಪರೀಕ್ಷೆಯಿಂದ ವಿನಾಯಿತಿ ಇರುತ್ತದೆ. ಒಂದು ವೇಳೆ **Ph.D** ಪದವಿಯನ್ನು ಆದರಿಸುವ ಅಭ್ಯರ್ಥಿಗಳು ದಿನಾಂಕ: 11.07.2009ರ ಪೂರ್ವದಲ್ಲಿ **Ph.D** ಪದವಿ ಪಡೆದಿದ್ದಲ್ಲಿ/ **Ph.D** ಪದವಿಗೆ ನೋಂದಣಿ ದಿನಾಂಕ 11.07.2009ರ ಪೂರ್ವದಲ್ಲಿ ನೊಂದಣಿ ಮಾಡಿಸಿದ್ದಲ್ಲಿ ಅಂತಹ ಅಭ್ಯರ್ಥಿಗಳು ದಿನಾಂಕ: 04.05.2016ರ ಯುಜಿಸಿ ಅಧಿಸೂಚನೆಯಲ್ಲಿ ಹೊರಡಿಸಿರುವ ನಿಯಮಗಳನ್ನು ಪೂರೈಸುವ ಷರತ್ತಿಗೊಳಪಟ್ಟಿರುತ್ತದೆ.

**(2) ವಯೋಮಿತಿ:–** ನೇಮಕಾತಿ ನಿಯಮದಂತೆ ಅಭ್ಯರ್ಥಿಗಳು ಕನಿಷ್ಠ ಮತ್ತು ಗರಿಷ್ಠ ವಯೋಮಿತಿ ಒಳಗೆ ಇರಬೇಕು. (ದಿನಾಂಕ : 20.06.2018ರ ಸರ್ಕಾರದ ಅದೇಶ ಸಂಖ್ಯೆ:ಇಡಿ:49:ಯುಪಿಸಿ/2018ರ ಪ್ರಕಾರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರ. ವರ್ಗ–1, ಗರಿಷ್ಠ 45, ಇತರೆ ಹಿಂದುಳಿದ ವರ್ಗ ಗರಿಷ್ಠ 43 ಹಾಗೂ ಸಾಮಾನ್ಯ ವರ್ಗ ಗರಿಷ್ಠ 40 ವರ್ಷಗಳು). ಸಾಮಾನ್ಯ ಅಭ್ಯರ್ಥಿ ಹಾಗೂ ಏಕವ್ಯಕ್ತಿ ವಿಭಾಗ ಎಂದು ಗುರುತಿಸಿರುವ ಹುದ್ದೆಗಳಿಗೆ ಎಲ್ಲಾ ವರ್ಗದ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಬಹುದಾಗಿದೆ. ದಿನಾಂಕ : 13.12.2018ರ ಅದೇಶ ಸಂಖ್ಯೆ ಇಡಿ/87/ಯು.ಪಿ.ಸಿ/2016ರ ಸರ್ಕಾರದ ಸೇರ್ಪಡೆ ಆದೇಶದನ್ವಯ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಪೂರ್ಣಕಾಲಿಕ ಬೋಧನಾನುಭವ ಹೊಂದಿರುವ ಸೇವಾವಧಿ ಅಥವಾ 5 ವರ್ಷಗಳು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಅವರಿಗೆ ವಯೋಮಿತಿಯಲ್ಲಿ ವಿನಾಯಿತಿ ಇರುತ್ತದೆ.

- ವೇತನ, ಭತ್ಯೆಗಳು ಹಾಗೂ ಇತರ ನಿಬಂಧನೆಗಳು ಯು.ಜಿ.ಸಿ ಮತ್ತು ಕರ್ನಾಟಕ ರಾಜ್ಯ ಸರ್ಕಾರಿ ನಿಯಮಾವಳಿಗಳನ್ವಯ ಇರುತ್ತದೆ.
- ಅಪೂರ್ಣ ಮಾಹಿತಿಗಳನ್ನೊಳಗೊಂಡ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಸಂದರ್ಶನಕ್ಕೆ ಕರೆ ಬಂದ ಅಭ್ಯರ್ಥಿಗಳು ಸ್ವಂತ ಖರ್ಚಿನಿಂದ ಸಂದರ್ಶನಕ್ಕೆ ಹಾಜರಾಗುವುದು.

**(3) ವೇತನಶ್ರೇಣಿ ಮತ್ತು ಇತರೆ ನಿಬಂಧನೆಗಳು:–** ಯುಜಿಸಿ ಮತ್ತು ಅನುದಾನಿತ ಕಾಲೇಜುಗಳಿಗೆ ಸಂಬಂಧಿಸಿದ ಕರ್ನಾಟಕ ಸರ್ಕಾರದ ನಿಯಮಗಳ ಪ್ರಕಾರ ಇರುತ್ತದೆ.

(4) ಸದರಿ ಹುದ್ದೆಗಳು ಅನುದಾನಿತ ಹುದ್ದೆಗಳಾಗಿದ್ದು, ಪಿಂಚಣಿ ರಹಿತ ಹುದ್ದೆಗಳಾಗಿರುತ್ತವೆ.

**(5)** ಅನುದಾನಿತ ಮತ್ತು ಸರ್ಕಾರಿ ಹುದ್ದೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವವರು ಅರ್ಜಿಗಳನ್ನು ಮಾತ್ರ ಸಂಸ್ಥೆಯಿಂದ ಪಡೆದ NOC ಯೊಂದಿಗೆ (ಹಿಂದಿನ ಸೇವಾ ಅವಧಿಯನ್ನು ಪರಿಗಣಿಸಲಾಗುವುದಿಲ್ಲ) ಸಲ್ಲಿಸಬೇಕು.

**(6)** ಸಂದರ್ಶನದ ದಿನಾಂಕ ಪ್ರತ್ಯೇಕವಾಗಿ ತಿಳಿಸಲಾಗುವುದು. ಸಂದರ್ಶನಕ್ಕೆ ಬರುವ ಅಭ್ಯರ್ಥಿಗಳಿಗೆ ಯಾವುದೇ ಪ್ರಯಾಣ/ ದಿನಭತ್ಯೆ ನೀಡಲಾಗುವುದಿಲ್ಲ.

(7) ಆಯ್ಕೆಯಾದ ಅಭ್ಯರ್ಥಿಗಳಿಗೆ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಇವರ ಅನುಮೋದನೆ ದೊರಕಿದ ನಂತರ ನೇಮಕಾತಿ ಆದೇಶ ನೀಡಲಾಗುವುದು.

**(8) ಅನುದಾನಿತ ಸಹಾಯಕ ಪ್ರಾಧ್ಯಾಪಕರ ಹುದ್ದೆಯ ನೇಮಕಾತಿಗೆ ಪ್ರಭಾವ ಬೀರಿದರೆ, ವಾಮಮಾರ್ಗ ಬಳಸಿದರೆ ಅಂತಹ ಅಭ್ಯರ್ಥಿಗಳ ಅರ್ಜಿಗಳನ್ನು ಅಮಾನ್ಯ ಮಾಡಲಾಗುವುದು.**

(9) ಪ್ರಮಾಣಪತ್ರದಲ್ಲಿ ಸುಳ್ಳು ಮಾಹಿತಿ ನೀಡಿದ್ದು ಕಂಡುಬಂದಲ್ಲಿ, ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಹಾಗೆಯೇ ಸೇವೆಯಲ್ಲಿರುವ ವ್ಯಕ್ತಿಗಳು ಅರ್ಜಿ ಸಲ್ಲಿಸಿದ ವೇಳೆ, ಅವರ ವಿರುದ್ಧ ಇಲಾಖಾ ವಿಚಾರಣೆಗಳು, ಕ್ರಿಮಿನಲ್ ವಿಚಾರಣೆಗಳು ಬಾಕಿಯಿದ್ದಲ್ಲಿ, ಈ ಹಿಂದೆ ವಿಚಾರಣೆಗಳನ್ನು ನಡೆಸಿ ದಂಡನೆ ವಿಧಿಸಲಾಗಿರುವ ಪ್ರಕರಣಗಳು ಇದ್ದಲ್ಲಿ ಅವರು ಸೇವೆ ಸಲ್ಲಿಸುತ್ತಿರುವ ಸಂಸ್ಥೆಯ ಮುಖ್ಯಸ್ಥರಿಂದ ಧೃಡೀಕರಿಸಿದ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕು.

(10) ಅರ್ಜಿ ಸಲ್ಲಿಸಿದ ಮಾತ್ರಕ್ಕೆ, ನೇಮಕಾತಿಗೆ ಹಕ್ಕು ಉಂಟಾಗಿದೆ ಎಂದು ಪ್ರತಿಪಾದಿಸಲು ಬರುವುದಿಲ್ಲ.

(11) ಸಾಮಾನ್ಯ ಅಭ್ಯರ್ಥಿ ಹಾಗೂ ಏಕವ್ಯಕ್ತಿ ವಿಭಾಗ ಎಂದು ಗುರುತಿಸಿರುವ ಹುದ್ದೆಗಳಿಗೆ ಎಲ್ಲಾ ವರ್ಗದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.

(12) ಎಲ್ಲಾ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಗಳಿಂದ ಧೃಡೀಕರಿಸಿ ಸಲ್ಲಿಸತಕ್ಕದ್ದು.

(13) ಅಯ್ಕೆಗೊಂಡ ಅಭ್ಯರ್ಥಿ ಕಡ್ಡಾಯವಾಗಿ ಸ್ಥಾನೀಯ ವಾಸ್ತವ್ಯವಿರಬೇಕು.

(14) ಯಾವುದೇ ಅರ್ಜಿಯನ್ನು ಒಪ್ಪುವ/ತಿರಸ್ಕರಿಸುವ ಅಧಿಕಾರ ಕಾಲೇಜಿನ ಆಡಳಿತ ಮಂಡಳಿ ಕಾಯ್ದಿರಿಸಿಕೊಂಡಿದೆ.

(15) ಸದರಿ ನೇಮಕಾತಿಯು ಇಲಾಖೆಯ ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆ / ಆದೇಶಗಳಿಗೆ ಒಳಗೊಂಡಿರುತ್ತದೆ.

**ಸಹಿ/–**
**ಕೆ.ಬಸಪ್ಪಗೌಡ, ಅಧ್ಯಕ್ಷರು,**
**ದೇಶೀಯ ವಿದ್ಯಾಶಾಲಾ ಸಮಿತಿ (ರಿ).ಶಿವಮೊಗ್ಗ.**

**ಸಹಿ/–**
**ಎಸ್.ರಾಜಶೇಖರ್, ಗೌರವ ಕಾರ್ಯದರ್ಶಿಗಳು,**
**ದೇಶೀಯ ವಿದ್ಯಾಶಾಲಾ ಸಮಿತಿ (ರಿ). ಶಿವಮೊಗ್ಗ.**